**TET - 2017** **Paper - II General Science** **6-8th Standard**

1. "ಬಲೂನುಗಳು, ಚಳಿಗಾಲಕ್ಕಿಂತ ಬೇಸಿಗೆಯಲ್ಲಿ ಹೆಚ್ಚಾಗಿ ಒಡೆಯುತ್ತವೆ" ಇದನ್ನು ವಿವರಿಸುವ ನಿಯಮ
(ಎ) ಬಾಯ್ಲ್‌ನ ನಿಯಮ (ಬಿ) ಗ್ರಹಾಮ್ ವಿಸರಣಾ ನಿಯಮ
(ಸಿ) ಚಾರ್ಲ್ಸ್‌ನ ನಿಯಮ (ಡಿ) ಗೇ ಲೂಸಾಕ್‌ನ ನಿಯಮ

2. ಶ್ರವಣಾತೀತ ತರಂಗಗಳನ್ನು ಕೃತಕ ಉಪಗ್ರಹಗಳ ಜಾಡು ಹಿಡಿಯಲು ಬಳಸುವುದಿಲ್ಲ ಕಾರಣ ಅವು
(ಎ) ಕೃತಕ ಉಪಗ್ರಹಗಳ ಕಾರ್ಯಕ್ಕೆ ಅಡ್ಡಿಪಡಿಸುತ್ತವೆ
(ಬಿ) ವಸ್ತು ಮಾಧ್ಯಮದಲ್ಲಿ ಮಾತ್ರ ಪ್ರಸರಿಸುತ್ತವೆ
(ಸಿ) ನಿರ್ವಾತದಲ್ಲಿ ಮಾತ್ರ ಪ್ರಸರಿಸುತ್ತವೆ
(ಡಿ) ಚಲಿಸುವ ಮಾಧ್ಯಮದಲ್ಲಿ ಶಕ್ತಿ ಬಿಡುಗಡೆ ಮಾಡಲು ಅಸಫಲವಾಗುತ್ತದೆ.

3. ದ್ರವ್ಯಾಂತರಣ ಎಂದರೆ
(ಎ) ನ್ಯೂಕ್ಲಿಯರ್ ಸಂಯುಕ್ತಗಳ ಉತ್ಪಾದನೆ
(ಬಿ) ಹೊಸ ಮಿಶ್ರಣಗಳ ಉತ್ಪಾದನೆ
(ಸಿ) ಐಸೋಟೋಪ್‌ಗಳ ಉತ್ಪಾದನೆ
(ಡಿ) ಎಲೆಕ್ಟ್ರಾನುಗಳ ಉತ್ಪಾದನೆ

4. ನ್ಯೂಕ್ಲಿಯರ್ ಕ್ರಿಯಾಕಾರಿಯ ಕ್ರಾಂತಿ ಸ್ಥಿತಿಯನ್ನು ಕಾಪಾಡಲು ಬಳಸುವುದು
(ಎ) ತಂಪುಕಾರಿ (ಬಿ) ಪ್ರತಿಫಲಕ
(ಸಿ) ಮಂದಕಾರಿ (ಡಿ) ನಿಯಂತ್ರಣ ಸರಳು

5. ಒಂದು ನೀಳ ತರಂಗದ ತರಂಗದೂರ 1 ಸೆಂ.ಮೀ. ಮತ್ತು ಗಾಳಿಯಲ್ಲಿ ಅದರ ವೇಗ $330 ms^{-1}$ ಈ ತರಂಗದ ಆವರ್ತಕ ಸಂಖ್ಯೆ
(a) $33x10^{-1}$Hz (b) 33x10Hz
(c) $33x10^{2}$Hz (d) $33x10^{3}$Hz

6. ದ್ಯುತಿ ತಂತು ಸಂಪರ್ಕಗಳಲ್ಲಿ ಬಳಸುವ ಡೈಯೋಡ್
(ಎ) ಬೆಳಕು ಉತ್ಸರ್ಜಕ ಡೈಯೋಡ್
(ಬಿ) ಝೀನರ್ ಡೈಯೋಡ್
(ಸಿ) ದ್ಯುತಿ ಡೈಯೋಡ್
(ಡಿ) ಲೇಸರ್ ಡೈಯೋಡ್

7. ಮೂಲ ಮತ್ತು ಪ್ರತಿಫಲಿತ ಧ್ವನಿಗಳ ನಡುವೆ ಇರುವ ಈ ಅಂಶದಿಂದ 'ಪ್ರತಿಧ್ವನಿ' ಉಂಟಾಗುತ್ತದೆ.
(ಎ) ಕಾಲಾಂತರ 0.2 ಸೆಕೆಂಡ್ ಇದ್ದಾಗ
(ಬಿ) ಅಂತರ ಗರಿಷ್ಠ 17 ಮೀಟರ್ ಇದ್ದಾಗ
(ಸಿ) ಒರಟಾದ ಎತ್ತರದ ಮೇಲ್ಮೈ ಇದ್ದಾಗ
(ಡಿ) ಶಬ್ಧದ ವೇಗ $340 ms^{-1}$ ಗಿಂತ ಹೆಚ್ಚಾಗಿದ್ದಾಗ

8. ಈ ಕಾರಣದಿಂದ ವಿದ್ಯುತ್ ಬಲ್ಬ್‌ಗಳಲ್ಲಿ ಟಂಗಸ್ಟನ್ ತಂತು ಬಳಸುತ್ತಾರೆ.
(ಎ) ಅಧಿಕ ರೋಧ ಮತ್ತು ಹೆಚ್ಚು ಕರಗುವ ಬಿಂದು
(ಬಿ) ಕಡಿಮೆ ರೋಧ ಮತ್ತು ಕಡಿಮೆ ಕರಗುವ ಬಿಂದು
(ಸಿ) ಅಧಿಕ ರೋಧ ಮತ್ತು ಕಡಿಮೆ ಕರಗುವ ಬಿಂದು
(ಡಿ) ಕಡಿಮೆ ರೋಧ ಮತ್ತು ಹೆಚ್ಚು ಕರಗುವ ಬಿಂದು

9. ಥರ್ಮೋಸೆಟ್ಟಿಂಗ್ ಪ್ಲಾಸ್ಟಿಕ್‌ಗೆ ಉದಾಹರಣೆ
(ಎ) ಪಾಲಿಥೀನ್ (ಬಿ) ಪ್ರೊಪೈಲೀನ್
(ಸಿ) ಸಿಲಿಕೋನ್ (ಡಿ) ಪಾಲಿವೀನೈಲ್ ಕ್ಲೋರೈಡ್

10. ಫ್ಲಿಂಟ್ ಗಾಜು ತಯಾರಿಕೆಯಲ್ಲಿ ಸಿಲಿಕಾಗೆ ಬೆರೆಸುವ ಕಚ್ಚಾವಸ್ತು
(ಎ) ಕ್ಯಾಲ್ಸಿಯಂ ಆಕ್ಸೈಡ್
(ಬಿ) ಸೀಸದ ಆಕ್ಸೈಡ್
(ಸಿ) ಪೊಟ್ಯಾಸಿಯಂ ಕಾರ್ಬೋನೇಟ್
(ಡಿ) ಬೋರಾನ್ ಮತ್ತು ಅಲ್ಯುಮಿನಾ

11. ಕ್ಯೂರಿಂಗ್ ಸಮಯದಲ್ಲಿ ನೀರನ್ನು ಹೀರಿಕೊಳ್ಳುವ ಸಿಮೆಂಟಿನ ಘಟಕಗಳು
(ಎ) ಕ್ಯಾಲ್ಸಿಯಂ ಸಲ್ಫೇಟ್ ಮತ್ತು ಅಲ್ಯುಮಿನಿಯಂ ಸಿಲಿಕೇಟ್
(ಬಿ) ಕ್ಯಾಲ್ಸಿಯಂ ಸಲ್ಫೇಟ್ ಮತ್ತು ಜಿಪ್ಸಂ
(ಸಿ) ಕ್ಯಾಲ್ಸಿಯಂ ಮತ್ತು ಅಲ್ಯುಮಿನಿಯಂ ಸಿಲಿಕೇಟ್
(ಡಿ) ಅಲ್ಯುಮಿನಿಯಂ ಸಿಲಿಕೇಟ್ ಮತ್ತು ಜಿಪ್ಸಂ

12. ಒಂದೇ ಗುಂಪಿಗೆ ಸೇರಿದ ಮೂಲ ವಸ್ತುಗಳು
(ಎ) ಬೋರಾನ್, ಕಾರ್ಬನ್, ಅಲ್ಯುಮಿನಿಯಂ, ಹೀಲಿಯಂ
(ಬಿ) ಹೈಡ್ರೋಜನ್, ಲೀಥಿಯಂ, ಬೆರಿಲಿಯಂ, ಬೋರಾನ್
(ಸಿ) ಲೀಥಿಯಂ, ಕ್ಯಾಲ್ಸಿಯಂ, ಸೋಡಿಯಂ, ಪೊಟ್ಯಾಸಿಯಂ
(ಡಿ) ಬೆರಿಲಿಯಂ, ಕ್ಯಾಲ್ಸಿಯಂ, ಮೆಗ್ನೀಷಿಯಂ, ಬೇರಿಯಂ

13. ಸೆರಾಮಿಕ್ ವಸ್ತುಗಳನ್ನು ತಯಾರಿಸುವಾಗ ಉಂಟಾಗುವ ಬಿರುಕುಗಳನ್ನು ನಿವಾರಿಸಲು ಸೇರಿಸಲಾಗುವ ವಸ್ತುಗಳು
(ಎ) ಫ್ಲಿಂಟ್ ಮತ್ತು ಸಿಲಿಕಾ (ಬಿ) ಫ್ಲಿಂಟ್ ಮತ್ತು ಗ್ಲಾಸ್ ಪೀಸ್
(ಸಿ) ಫ್ಲಿಂಟ್ ಮತ್ತು ಕ್ವಾರ್ಟ್ಸ್ (ಡಿ) ಫ್ಲಿಂಟ್ ಮತ್ತು ಕ್ಲೇ

14. ಸಿಲಿಕಾನ್‌ನ ಎಲೆಕ್ಟ್ರಾನಿಕ್ ವಿನ್ಯಾಸ
(a) $1s^2, 2s^2, 3p^6, 3s^2, 3p^2$ (b) $1s^2, 2s^2, 2p^6, 3s^2, 3p^4$
(c) $1s^2, 2s^2, 2p^6, 3s^2, 3p^5$ (d) $1s^2, 2s^2, 2p^6, 3s^2, 3p^6, 3d^1$

15. ಸಾಬೂನೀಕರಣದಲ್ಲಿ ಕೊಬ್ಬು ಮತ್ತು ಎಣ್ಣೆಗಳನ್ನು ತಟಸ್ಥೀಕರಣಗೊಳಿಸಲು ಬಳಸುವುದು
(ಎ) ಪೊಟ್ಯಾಷಿಯಂ ಹೈಡ್ರಾಕ್ಸೈಡ್
(ಬಿ) ಪೊಟ್ಯಾಷಿಯಂ ಕ್ಲೋರೈಡ್
(ಸಿ) ಪೊಟ್ಯಾಷಿಯಂ ಕ್ಲೋರೇಟ್
(ಡಿ) ಪೊಟ್ಯಾಷಿಯಂ ನೈಟ್ರೇಟ್

16. ದುಗ್ಧರಸದಲ್ಲಿರುವುದು
(ಎ) ಆರ್.ಬಿ.ಸಿ ಮತ್ತು ಪ್ರೋಟಿನ್‌ಗಳು
(ಬಿ) ಆರ್.ಬಿ.ಸಿ ಮತ್ತು ಡಬ್ಲ್ಯೂ.ಬಿ.ಸಿ
(ಸಿ) ಡಬ್ಲ್ಯೂ.ಬಿ.ಸಿ ಮತ್ತು ಪ್ರೋಟಿನ್‌ಗಳು
(ಡಿ) ಆರ್.ಬಿ.ಸಿ ಮಾತ್ರ

17. ಎರಡು ಮೂತ್ರ ಪಿಂಡಗಳ ಮೇಲೆ ಇರುವ ಗ್ರಂಥಿಗಳು
(ಎ) ಥೈರಾಯಿಡ್ ಗ್ರಂಥಿಗಳು
(ಬಿ) ಪ್ಯಾರಾಥೈರಾಯಿಡ್ ಗ್ರಂಥಿಗಳು
(ಸಿ) ಅಡ್ರಿನಲ್ ಗ್ರಂಥಿಗಳು
(ಡಿ) ಐಲೆಟ್ಸ್ ಆಫ್ ಲ್ಯಾಂಗರ್‌ಹಾನ್ಸ್

18. ಈ ಕೆಳಗಿನವುಗಳಲ್ಲಿ ಆಹಾರ ಮಿಶ್ರಕವಲ್ಲದ್ದು?
(ಎ) ಪ್ರತಿ ಉತ್ಕರ್ಷಕಗಳು (ಬಿ) ವರ್ಣಕಾರಕಗಳು
(ಸಿ) ಪಾಲಿಪ್ಲಾಯಿಡ್‌ಗಳು (ಡಿ) ರುಚಿಕಾರಕಗಳು

19. ಈ ಕೆಳಗಿನವುಗಳಲ್ಲಿ ಅಂಗಾಂಶ
(ಎ) ನ್ಯೂರಾನ್
(ಬಿ) ಗ್ರಾಹಕಗಳು
(ಸಿ) ವಾಹಕಗಳು
(ಡಿ) ಕಾರ್ಯನಿರ್ವಾಹಕಗಳು

20. ಹಾರಲಾಗದ ಪಕ್ಷಿಗಳ ಗುಂಪು
(ಎ) ಕಿವಿ, ಆಸ್ಟ್ರಿಚ್, ಬಾತುಕೋಳಿ, ರಿಯಾ
(ಬಿ) ಆಸ್ಟ್ರಿಚ್, ಕಿವಿ, ಎಮು, ನವಿಲು
(ಸಿ) ಫ್ಲೆಮಿಂಗೋ, ಕಿವಿ, ಆಸ್ಟ್ರಿಚ್, ರಿಯಾ
(ಡಿ) ಆಸ್ಟ್ರಿಚ್, ಕಿವಿ, ಎಮು, ರಿಯಾ

21. ರಾಜ್ಯಮಟ್ಟದ ನಾಡಗೀತೆ ಹಾಡುವ ಸ್ಪರ್ಧೆಗೆ ಹೆಣ್ಣು ಮಕ್ಕಳನ್ನು ಆಯ್ಕೆಮಾಡಲು ಶಾಲೆ ಹೆಚ್ಚಿನ ಪ್ರಾಶಸ್ತ್ಯ ನೀಡಿತು. ಇದು ಪ್ರತಿಫಲಿಸುವುದು.
(ಎ) ಮೌಲ್ಯೀಕರಿಸುವಿಕೆ
(ಬಿ) ಲೋಕಾ ರೂಢಿ
(ಸಿ) ಸ್ವಾಭಾವಿಕತೆ
(ಡಿ) ಲಿಂಗ ತಾರತಮ್ಯ

22. ಶಾಲಾ ಹಂತದಲ್ಲಿ ಮೌಲ್ಯಾಂಕನದ ಪ್ರಾಥಾಮಿಕ ಮೂಲಾಧಾರದ ಅಂಶ
(ಎ) ಮೌಲ್ಯಾಂಕನವು ಹೆಚ್ಚು ಭಾವನಾತ್ಮಕವಾಗಿರಬೇಕು
(ಬಿ) ಯಾವುದೇ ವಿಧಾನದಲ್ಲಿಯಾದರೂ ಸರಿ, ಮಗು ಉತ್ತಮ ಅಂಕಗಳನ್ನೇ ಗಳಿಸಬೇಕು.
(ಸಿ) ಮಗುವಿನ ಕಲಿಕಾ ಸಾಮರ್ಥ್ಯಗಳು ಶಿಕ್ಷಕನಿಗೆ ಚೆನ್ನಾಗಿ ಗೊತ್ತಿರುತ್ತದೆ
(ಡಿ) ಮೌಲ್ಯಾಂಕನವು ವ್ಯಕ್ತಿಗತವಾದದ್ದು

23. ಅನುಭವಾತ್ಮಕ ಕಲಿಕೆಯ ವಿವಿಧ ಅಂಶಗಳ ಕ್ರಮಾನುಗತ ಜೋಡಣೆಯ ಆಯ್ಕೆ
(1) ಗುಂಪು ಅಥವಾ ವೈಯಕ್ತಿಕ ಚಟುವಟಿಕೆಗಳ ಮೂಲಕ ಚಿಂತನೆಗೆ ದಾರಿ ಮಾಡಿಕೊಡುವುದು
(2) ಕಲಿಕೆಯನ್ನು ನಿರ್ದೇಶಿಸುವುದು
(3) ಕಲಿಕೆಯನ್ನು ಅನುಕೂಲಿಸುವುದು
(4) ಕಲಿಕೆಯನ್ನು ಕ್ರೋಢಿಕರಿಸುವುದು
(ಎ) 1 3 4 2 (ಬಿ) 3 1 2 4
(ಸಿ) 1 3 2 4 (ಡಿ) 2 31 4

24. 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವರುಣ್ ಎಂಬ ವಿದ್ಯಾರ್ಥಿ 'ಸಾಲುಮರದ ತಿಮ್ಮಕ್ಕ' ರವರ ಹಾದಿಯಲ್ಲೇ ಸಾಗಲು ನಿರ್ಧರಿಸುತ್ತಾನೆ. ವರುಣನ ಈ ವರ್ತನೆ
(ಎ) ಬುದ್ಧಿವಂತಿಕೆ
(ಬಿ) ಭಾವನಾತ್ಮಕ
(ಸಿ) ಮನೋಚಾಲನ
(ಡಿ) ಪ್ರಶಂಸೆ

25. ಯಾವ ಕಲಿಕಾಂಶವನ್ನು ವೈಜ್ಞಾನಿಕ ವಿಚಾರಣಾ ಕ್ರಮದ ಮೂಲಕ ಬೋಧಿಸಬಹುದು?
(ಎ) ಅಣುವಿನಲ್ಲಿ ಎಲೆಕ್ಟ್ರಾನುಗಳ ಜೋಡಣೆ
(ಬಿ) ಕುಲುಮೆ ಕೆಲಸ ಮಾಡುವ ವಿಧಾನ
(ಸಿ) ರಾಸಾಯನಿಕ ಕ್ರಿಯೆಗಳ ವಿಧಗಳು
(ಡಿ) ಘನ ವಸ್ತುಗಳು, ದ್ರವಗಳಲ್ಲಿ ಮುಳುಗಿಸಿದಾಗ ಅವು ತೂಕ ಕಳೆದುಕೊಳ್ಳುತ್ತವೆ

26. ಅನುಗಮನ ಪದ್ಧತಿಯಲ್ಲಿ ವಿದ್ಯಾರ್ಥಿ ಬೆಳೆಸಿಕೊಳ್ಳುವ ಗುಣ
(ಎ) ತಾರ್ಕಿಕ ಚಿಂತನೆ
(ಬಿ) ಸಮಸ್ಯ ಬಿಡಿಸುವಿಕೆ
(ಸಿ) ಪ್ರಶ್ನಿಸುವಿಕೆ
(ಡಿ) ವೈಜ್ಞಾನಿಕ ಚಿಂತನೆ

27. ಯಾವ ಹೇಳಿಕೆ ವೈಜ್ಞಾನಿಕ ವಿಧಾನದ ಬೋಧನಾಶಾಸ್ತ್ರಕ್ಕೆ ಸರಿಹೊಂದುತ್ತದೆ?
(ಎ) ವಿದ್ಯಾರ್ಥಿಗಳು ಸ್ವತಂತ್ರವಾಗಿ ಕಾರಣ ಹುಡುಕಬೇಕಿಲ್ಲ
(ಬಿ) ಶಾಲೆಯ ಹೊರಗಿನ ಕಲಿಕೆ ಗಣನೀಯವಲ್ಲ
(ಸಿ) ಮಗುವಿನ ಅರ್ಥ ಗ್ರಹಿಕೆ ಸಮಂಜಸವಾದುದು
(ಡಿ) ತರಗತಿ ಪ್ರಕ್ರಿಯೆಯನ್ನು ಶಿಕ್ಷಕರೇ ಮುನ್ನಡೆಸಬೇಕು

28. ಎಡ್ಗರ್ ಡೇಲ್‌ನ ಕಲಿಕಾನುಭವದ ಶಂಕುವಿನಲ್ಲಿ ಕಲಿಕಾ ಅನುಭವಗಳು ಚಲಿಸುವುದು
(ಎ) ಸರಳತೆಯಿಂದ ಸಂಕೀರ್ಣತೆಯೆಡೆಗೆ
(ಬಿ) ಗೊತ್ತಿರುವುದರಿಂದ ಗೊತ್ತಿಲ್ಲದ ಕಡೆಗೆ
(ಸಿ) ಸಾಮಾನ್ಯೀಕರಣದಿಂದ ನಿರ್ದಿಷ್ಟತೆಯೆಡೆಗೆ
(ಡಿ) ಮೂರ್ತತೆಯಿಂಥ ಅಮೂರ್ತತೆಯಡೆಗೆ

29. ರವೆಯಲ್ಲಿ ಮಿಶ್ರಣಗೊಂಡಿರುವ ಕಬ್ಬಿಣದ ರಜಗಳನ್ನು ತೆಗೆಯಲು ಅಮ್ಮನಿಗೆ ನೆರವಾಗುವ ಅರುಣಳು ಅಯಸ್ಕಾಂತ ಉಪಯೋಗಿಸಿದಳು. ಅರುಣಳ ಈ ಚಟುವಟಿಕೆಯ ವಲಯ
(ಎ) ಬೌದ್ಧಿಕ (ಬಿ) ಜ್ಞಾನಾತ್ಮಕ
(ಸಿ) ಮನೋವೈಜ್ಞಾನಿಕ (ಡಿ) ಭಾವನಾತ್ಮಕ

30. ಖಗೋಳ ವಿಜ್ಞಾನದ ಸಂಶೋಧನೆಗಾಗಿ ನೊಬೆಲ್ ಪ್ರಶಸ್ತಿ ಪಡೆದ ಭಾರತೀಯ ವಿಜ್ಞಾನಿ ಹೆಸರು
(ಎ) ಸರ್. ಸಿ.ವಿ. ರಾಮನ್
(ಬಿ) ಸತ್ಯೇಂದ್ರನಾಥ್ ಬೋಸ್
(ಸಿ) ಹರ್‌ಗೋವಿಂದ ಖೊರಾನಾ
(ಡಿ) ಸುಬ್ರಹ್ಮಣ್ಯಂ ಚಂದ್ರಶೇಖರ್

**ಕೀ – ಉತ್ತರಗಳು**

| | | | | | |
|---|---|---|---|---|---|
| 1 | ಸಿ | 11 | ಸಿ | 21 | ಡಿ |
| 2 | ಬಿ | 12 | ಡಿ | 22 | ಡಿ |
| 3 | ಸಿ | 13 | ಸಿ | 23 | ಬಿ |
| 4 | ಡಿ | 14 | ಎ | 24 | ಬಿ |
| 5 | ಡಿ | 15 | ಎ | 25 | ಡಿ |
| 6 | ಡಿ | 16 | ಸಿ | 26 | ಎ |
| 7 | ಬಿ | 17 | ಸಿ | 27 | ಸಿ |
| 8 | ಎ | 18 | ಸಿ | 28 | ಡಿ |
| 9 | * | 19 | ಸಿ | 29 | ಬಿ |
| 10 | ಬಿ | 20 | ಡಿ | 30 | ಡಿ |

Prepp Your Personal Exams Guide

**TET - 2015** **Paper - II General Science** **6-8th Standard**

1. ಈ ಕೆಳಗಿನ ಸಮುದ್ರ ಆವಾಸ ಪ್ರಾಣಿಗಳಲ್ಲಿ ನಿಜವಾದ ಮೀನು ಯಾವುದು?
(ಎ) ಚಿಪ್ಪು ಮೀನು (ಬಿ) ನಕ್ಷತ್ರ ಮೀನು
(ಸಿ) ಸಮುದ್ರ ಕುದುರೆ (ಡಿ) ತಿಮಿಂಗಿಲ

2. ಎರೆಹುಳು ಬಳಸಿ ತಯಾರಿಸುವ ವಿಧಾನವನ್ನು ಏನೆಂದು ಕರೆಯುವರು?
(ಎ) ಎಪಿಕಲ್ಚರ್ (ಬಿ) ಸಿರಿಕಲ್ಚರ್
(ಸಿ) ಅಕ್ವಾ ಕಲ್ಚರ್ (ಡಿ) ವರ್ಮಿಕಲ್ಚರ್

3. $Ca(H_2PO_4)_2$ ರಾಸಾಯನಿಕ ಸೂತ್ರ ಹೊಂದಿರುವ ರಾಸಾಯನಿಕವನ್ನು ಹೆಸರಿಸಿ.
(ಎ) ಯೂರಿಯಾ (ಬಿ) ಸೂಪರ್ ಫಾಸ್ಪೇಟ್
(ಸಿ) ಅಮೋನಿಯಂ ಫಾಸ್ಫೇಟ್ (ಡಿ) ಸೋಡಿಯಂ ಫಾಸ್ಫೇಟ್

4. ಇವುಗಳಲ್ಲಿ ಲಿವರ್‌ಫ್ಲೂಕ್‌ನ ವಿಸರ್ಜನಾಂಗ ಯಾವುದು?
(ಎ) ಮೂತ್ರಪಿಂಡ (ಬಿ) ಫ್ಲೇಮ್ ಸೆಲ್
(ಸಿ) ನೆಫ್ರಿಡಿಯಂ (ಡಿ) ಮಾಲ್‌ಪಿಜಿಯನ್ ಟುಬ್ಯೂಲ್

5. ಭಾರತರತ್ನ ಪ್ರಶಸ್ತಿ ಪಡೆದ ಕನ್ನಡದ ವಿಜ್ಞಾನಿ
(ಎ) ಡಾ॥ ಎ.ಪಿ.ಜೆ ಅಬ್ದುಲ್ ಕಲಾಂ
(ಬಿ) ಡಾ॥ ಸಿ.ಎನ್.ಆರ್. ರಾವ್
(ಸಿ) ಡಾ॥ ಯು.ಆರ್. ರಾವ್
(ಡಿ) ಸರ್.ಎಂ. ವಿಶ್ವೇಶ್ವರಯ್ಯ

6. ICTಯ ವಿಸ್ತರಣಾ ರೂಪ
(ಎ) ಇನ್ಫರ್‌ಮೇಷನ್ ಅಂಡ್ ಕಮ್ಯೂನಿಕೇಷನ್ ಟೆಕ್ನಾಲಜಿ
(ಬಿ) ಇನ್ಫರ್‌ಮೇಷನ್ ಅಂಡ್ ಕನ್ಸರ್ವೇಷನ್ ಟೆಕ್ನಾಲಜಿ
(ಸಿ) ಇಂಟರ್ನಲ್ ಕಮ್ಯುನಿಕೇಷನ್ ಟೆಕ್ನಾಲಜಿ
(ಡಿ) ಇಂಟರ್-ಕನೆಕ್ಟೆಡ್ ಟೆಕ್ನಾಲಜೀಸ್

7. ಹಾಲಿನ ಪುಡಿಯ ಕಲಬೆರಕೆಗೆ ಸಾಮಾನ್ಯವಾಗಿ ಬಳಸುವ ವಸ್ತುಗಳು
(ಎ) ಯೂರಿಯಾ ಮತ್ತು ಸೋಡಾ (ಬಿ) ಪಿಷ್ಟ ಮತ್ತು ಸಕ್ಕರೆ
(ಸಿ) ಚಾಕ್‌ಪುಡಿ ಮತ್ತು ಸುಣ್ಣ (ಡಿ) ಸೋಡಾ ಮತ್ತು ಉಪ್ಪು

8. ಗೃಹಬಳಕೆಗೆ ಸರಬರಾಜಾಗುವ ವಿದ್ಯುತ್‌ನ ವಿಧ
(ಎ) ನೇರ ವಿದ್ಯುತ್
(ಬಿ) ಶುಷ್ಕ ಕೋಶದ ವಿದ್ಯುತ್
(ಸಿ) ಪರ್ಯಾಯ ವಿದ್ಯುತ್
(ಡಿ) ಸೌರ ಕೋಶದ ವಿದ್ಯುತ್

9. ವಿವಿಧ ಪೋಷಣಾ ಸ್ತರಗಳಲ್ಲಿ ನಿಧಾನಗತಿಯಲ್ಲಿ ಹೆಚ್ಚಾಗುವ ಡಿ.ಡಿ.ಟಿ.ಯ ಸಾಂದ್ರತೆಗೆ ಏನೆನ್ನುತ್ತಾರೆ?
(ಎ) ಆಹಾರ ವಿಷವಾಗುವುದು (ಬಿ) ಜೈವಿಕ ಗಾತ್ರ ವೃದ್ಧಿ
(ಸಿ) ಆಹಾರ ಸರಪಣಿ ವೃದ್ಧಿ (ಡಿ) ಆಹಾರ ಕಲಬೆರಕೆ

10. ಪ್ಯಾರಾಫಿನ್ ಕಾಗದವನ್ನು ಸಾಮಾನ್ಯವಾಗಿ ಏನೆಂದು ಕರೆಯುತ್ತಾರೆ?
(ಎ) ಟಿಷ್ಯೂ ಕಾಗದ (ಬಿ) ಲಿಟ್ಮಸ್ ಕಾಗದ
(ಸಿ) ವ್ಯಾಕ್ಸ್ ಕಾಗದ (ಡಿ) ಫಿಲ್ಟರ್ ಕಾಗದ

11. ಕ್ವಾಷಿಯೋರ್‌ಕರ್ ಯಾವ ಆಹಾರದ ಮೂಲ ಘಟಕದ ಅಭಾವದಿಂದ ಉಂಟಾಗುತ್ತದೆ?
(ಎ) ಪ್ರೋಟೀನ್ (ಬಿ) ಕಾರ್ಬೋಹೈಡ್ರೇಟ್
(ಸಿ) ಕೊಬ್ಬು (ಡಿ) ವಿಟಮಿನ್

12. ವಿದ್ಯಾರ್ಥಿಗಳ ಕಲಿಕೆಯ ಅಂತರ ತುಂಬಲು ಅನುಸರಿಸುವ ಕಾರ್ಯತಂತ್ರ
(ಎ) ಹೆಚ್ಚಿನ ಸಮಯ ಪಾಠ ಮಾಡುವುದು
(ಬಿ) ಪರಿಹಾರ ಬೋಧನೆ
(ಸಿ) ವಿಶೇಷ ತರಗತಿಗಳು
(ಡಿ) ಅತಿಥಿ ಉಪನ್ಯಾಸಗಳು

13. ಜೈವಿಕ ಇಂಧನ ತಯಾರಿಸಲು ಈ ಕೆಳಗಿನ ಯಾವ ಸಸ್ಯದ ಬೀಜಗಳನ್ನು ಬಳಸಲಾಗುವುದು?
(ಎ) ಪೇರಲ (ಬಿ) ಅತ್ತಿ
(ಸಿ) ಜಟ್ರೋಪ (ಡಿ) ಸಾಗುವಾನಿ

14. ವಿಶ್ವ ಜಲ ದಿನಾಚರಣೆ ಆಚರಿಸಲಾಗುವ ದಿನ
(ಎ) ಜೂನ್ 5 (ಬಿ) ಏಪ್ರಿಲ್ 22
(ಸಿ) ಮೇ 22 (ಡಿ) ಮಾರ್ಚ್ 22

15. ಕೆಳಗಿನ ಯಾವ ಬಲ ಚಲಿಸುವಂತೆ ವಸ್ತುವಿನ ವೇಗ ಕಡಿಮೆ ಮಾಡಿ ವಸ್ತು ನಿಲ್ಲುವಂತೆ ಮಾಡುತ್ತದೆ?
(ಎ) ಗುರುತ್ವಾಕರ್ಷಣ ಬಲ (ಬಿ) ಘರ್ಷಣಾ ಬಲ
(ಸಿ) ಅಯಸ್ಕಾಂತೀಯ ಬಲ (ಡಿ) ಸ್ಥಿತಿ ಸ್ಥಾಪಕ ಬಲ

16. ಜೀವಕೋಶದ ಯಾವ ಕಣದಂಗಗಳನ್ನು ಆತ್ಮಹತ್ಯಾ ಸಂಚಿಗಳು ಎಂದು ಕರೆಯುತ್ತಾರೆ?
(ಎ) ರೈಬೋಸೋಮ್‌ಗಳು (ಬಿ) ಲೈಸೋಸೋಮ್‌ಗಳು
(ಸಿ) ಮೈಟೋಕಾಂಡ್ರಿಯಾಗಳು (ಡಿ) ಗಾಲ್ಗಿ ಸಂಕೀರ್ಣಗಳು

17. ಅಯಸ್ಕಾಂತ ತನ್ನ ಕಾಂತತ್ವವನ್ನು ಕಳೆದುಕೊಳ್ಳುವ ಸಂದರ್ಭ
(ಎ) ಕಾಯಿಸಿದಾಗ
(ಬಿ) ಅಯಸ್ಕಾಂತದ ಮೂಲಕ ವಿದ್ಯುತ್ ಹರಿಸಿದಾಗ
(ಸಿ) ಅಯಸ್ಕಾಂತವನ್ನು ತಂಪು ನೀರಿನಲ್ಲಿ ಮುಳುಗಿಸಿದಾಗ
(ಡಿ) ಅಯಸ್ಕಾಂತವನ್ನು ಮಣ್ಣಿನಲ್ಲಿ ಮುಚ್ಚಿದಾಗ

19. ತ್ಯಾಜ್ಯ ನಿರ್ವಹಣಾ ವಿಧಾನವನ್ನು ಕಥೆ ಹೇಳುವ ಮೂಲಕ ವಿವರಿಸಲು ಬಳಸುವ ಉತ್ತಮ ಉದಾಹರಣೆ
(ಎ) ಮದುವೆ ಮನೆಯಲ್ಲಿ ಒಂದು ದಿನ
(ಬಿ) ಕಾಡಿನಲ್ಲಿ ಬೇಟೆ ಆಡುವ ರಾಜ
(ಸಿ) ನರಿ ಮತ್ತು ಹುಳಿ ದ್ರಾಕ್ಷಿ ಕಥೆ
(ಡಿ) ಮೊಲ ಮತ್ತು ಆಮೆಯ ಕಥೆ

20. ಇವುಗಳಲ್ಲಿ ಯಾವುದು ಮೌಲ್ಯಮಾಪನ ತಂತ್ರ?
(ಎ) ಪರೀಕ್ಷೆ (ಬಿ) ಪ್ರಶ್ನೆಪತ್ರಿಕೆ
(ಸಿ) ದರ್ಜಾ ಮಾಪನ (ಡಿ) ತಪಶೀಲು ಪಟ್ಟಿ

21. ಹಸಿರು ಮನೆ ಪರಿಣಾಮದಿಂದ ಭೂಮಿಯ ಮೇಲಾಗುವ ಪರಿಣಾಮ
(ಎ) ಭೂಮಿಯ ತಾಪಮಾನದಲ್ಲಿ ಹೆಚ್ಚಳ
(ಬಿ) ಭೂಮಿಯ ತಾಪಮಾನದಲ್ಲಿ ಇಳಿಕೆ

(ಸಿ) ಜ್ವಾಲಾಮುಖಿ ಸ್ಫೋಟ ಪ್ರಮಾಣ ಇಳಿಕೆ
(ಡಿ) ಭೂಕಂಪ ಸಂಭವಿಸುವ ಪ್ರಮಾಣದ ಏರಿಕೆ

22. ವಾಯುಮಾಲಿನ್ಯದ ಜೈವಿಕ ಸೂಚಕ
(ಎ) ಪಾಚಿ (ಬಿ) ಶಿಲೀಂಧ್ರಗಳು
(ಸಿ) ಕಲ್ಲು ಹೂಗಳು (ಡಿ) ಬ್ಯಾಕ್ಟೀರಿಯಾಗಳು

23. ಬೇಕಿಂಗ್ ಸೋಡಾ (ಅಡುಗೆ ಸೋಡಾ)ದಲ್ಲಿರುವ ಮೂಲವಸ್ತುಗಳು
(ಎ) ಸೋಡಿಯಂ, ಕಾರ್ಬನ್, ನೈಟ್ರೋಜನ್, ಆಕ್ಸಿಜನ್
(ಬಿ) ಸೋಡಿಯಂ, ಕಾರ್ಬನ್, ಹೈಡ್ರೋಜನ್, ಆಕ್ಸಿಜನ್
(ಸಿ) ಸೋಡಿಯಂ, ಸಲ್ಫರ್, ನೈಟ್ರೋಜನ್, ಆಕ್ಸಿಜನ್
(ಡಿ) ಸೋಡಿಯಂ, ಪೊಟ್ಯಾಸಿಯಂ, ನೈಟ್ರೋಜನ್, ಆಕ್ಸಿಜನ್

24. ಗುಲ್ಬರ್ಗಾ, ಬಿಜಾಪುರ, ಕೊಡಗು ಹಾಗೂ ಮಂಗಳೂರು ಶಿಕ್ಷಕರು, ತಮ್ಮ ವಿದ್ಯಾರ್ಥಿಗಳಿಗೆ ಸಮುದ್ರ ಆವಾಸ ಕಲಿಕೆಗಾಗಿ ಕ್ಷೇತ್ರ ಭೇಟಿಯನ್ನು ಯೋಜಿಸಿದ್ದಾರೆ. ಇವರಲ್ಲಿ ಯಾರಿಗೆ ಈ ವಿಧಾನ ಹೆಚ್ಚು ಅನುಕೂಲಕರ?
(ಎ) ಗುಲ್ಬರ್ಗಾ (ಬಿ) ಬಿಜಾಪುರ
(ಸಿ) ಕೊಡಗು (ಡಿ) ಮಂಗಳೂರು

25. ಈ ಕೆಳಗಿನವುಗಳಲ್ಲಿ ಯಾವುದು ಪ್ರಕ್ಷೇಪಣವಲ್ಲದ ಮಾಧ್ಯಮ?
(ಎ) ಶಿರೋನ್ನತ ಪ್ರಕ್ಷೇಪ (ಬಿ) ಎಪಿಡಿಯೊ ಸ್ಕೋಪ್
(ಸಿ) ಕರಿ ಹಲಗೆ (ಡಿ) ಎಲ್.ಸಿ.ಡಿ

26. ಮಳೆ ನೀರು ಕೊಯ್ಲಿನ ಮುಖ್ಯ ಉದ್ದೇಶ
(ಎ) ಅಣೆಕಟ್ಟುಗಳಲ್ಲಿನ ನೀರಿನ ಪ್ರಮಾಣ ಹೆಚ್ಚಳ
(ಬಿ) ಭೂಮಿಯೊಳಗಿನ ಜಲಮಟ್ಟದ ಮರುಪೂರಣ
(ಸಿ) ಮರು ಅರಣ್ಯೀಕರಣ
(ಡಿ) ಮಣ್ಣಿನ ಫಲವತ್ತತೆಯಲ್ಲಿ ಹೆಚ್ಚಳ

27. ಈ ಕೆಳಗಿನ ವಿಧಾನಗಳಲ್ಲಿ ಯಾವುದು ನಿಜವಾದ ಮೌಲ್ಯಮಾಪನ?
(ಎ) ಶೈಕ್ಷಣಿಕ ವರ್ಷಾಂತ್ಯದಲ್ಲಿ ಮೌಲ್ಯಮಾಪನ ಮಾಡುವುದು
(ಬಿ) ಶೈಕ್ಷಣಿಕ ಅವಧಿಯಲ್ಲಿ ಎರಡು ಬಾರಿ ಮೌಲ್ಯಮಾಪನ ನಡೆಸುವುದು
(ಸಿ) ನಿರಂತರ ಪರೀಕ್ಷೆ ನಡೆಸುವುದು
(ಡಿ) ರೂಪಣಾತ್ಮಕ ಮೌಲ್ಯಮಾಪನ

28. ಬೇಸಿಗೆಯಲ್ಲೂ ಪರ್ವತ ಪ್ರದೇಶಗಳು ತಂಪಾಗಿರುವುದಕ್ಕೆ ವಿದ್ಯಾರ್ಥಿಗಳು ಕಾರಣ ಕೊಡುವರು. ಇದು ಈ ಕೆಳಗಿನವುಗಳಿಗೆ ಸಂಬಂಧಿಸಿದೆ.
(ಎ) ಜ್ಞಾನ (ಬಿ) ಅರ್ಥೈಸುವಿಕೆ
(ಸಿ) ಅನ್ವಯ (ಡಿ) ಕೌಶಲ್ಯ

29. ಮಾನವನು ಉಗಮವಾದ ಯುಗ
(ಎ) ಪ್ರೋಟೆರೋಜೋಯಿಕ್ ಯುಗ
(ಬಿ) ಪಾಲಿಯೋಜೋಯಿಕ್ ಯುಗ
(ಸಿ) ಮೀಸೋಜೋಯಿಕ್ ಯುಗ
(ಡಿ) ಸೀನೋಜೋಯಿಕ್ ಯುಗ

30. ಸಸ್ಯ ಅಂಗಾಂಶಗಳು ಪ್ರಚೋದನೆಗೆ ತಕ್ಕ ಪ್ರತಿಕ್ರಿಯೆ ವ್ಯಕ್ತಪಡಿಸುತ್ತವೆ ಎಂಬುದನ್ನು ತೋರಿಸಲು ಜೆ.ಸಿ. ಬೋಸ್‌ರವರು ಕಂಡುಹಿಡಿದ ಉಪಕರಣ
(ಎ) ಕ್ರೆಸ್ಕೋಗ್ರಾಫ್ (ಬಿ) ಸೆಸ್ಮೋಗ್ರಾಫ್
(ಸಿ) ಬಯೋಗ್ರಾಫ್ (ಡಿ) ಕಾರ್ಡಿಯೋಗ್ರಾಫ್

## ಕೀ – ಉತ್ತರಗಳು

| | | | | | |
|---|---|---|---|---|---|
| 1 | ಸಿ | 11 | ಎ | 21 | ಎ |
| 2 | ಡಿ | 12 | ಬಿ | 22 | ಸಿ |
| 3 | ಬಿ | 13 | ಸಿ | 23 | ಬಿ |
| 4 | ಬಿ | 14 | ಡಿ | 24 | ಡಿ |
| 5 | ಬಿ | 15 | ಬಿ | 25 | ಸಿ |
| 6 | ಎ | 16 | ಬಿ | 26 | ಬಿ |
| 7 | ಬಿ | 17 | ಎ | 27 | ಡಿ |
| 8 | ಸಿ | 18 | ಬಿ | 28 | ಸಿ |
| 9 | ಬಿ | 19 | ಎ | 29 | ಡಿ |
| 10 | ಸಿ | 20 | ಎ | 30 | ಎ |

www.prepp.in

prepp
Your Personal Exams Guide

**TET - 2014** **Paper - II General Science** **6-8th Standard**

1. ಪ್ರಯೋಗ ಶಾಲೆಯಲ್ಲಿ ಲವಣಗಳನ್ನು ತಯಾರಿಸಲು ಬಳಸುವ ಒಂದು ವಿಧಾನ
(ಎ) ಲೋಹ ಮತ್ತು ಆಮ್ಲ
(ಬಿ) ಆಮ್ಲ ಮತ್ತು ಕ್ಷಾರೀಯ
(ಸಿ) ಕಾರ್ಬೋನೇಟ್ ಮತ್ತು ಆಮ್ಲ
(ಡಿ) ಲೋಹ ಮತ್ತು ಅಲೋಹ

2. ಪ್ರೋಪೇನ್‌ನ ಪೂರ್ಣ ದಹನ ಕ್ರಿಯೆಯನ್ನು ಸೂಚಿಸುವ ರಾಸಾಯನಿಕ ಸಮೀಕರಣ
(a) $2C_3H_8 + 9O_2 \longrightarrow 4CO_2 + 8H_2O + 2CO$
(b) $C_3H_8 + 4O_2 \longrightarrow 2CO + CO_2 + 4H_2O$
(c) $C_3H_8 + 5O_2 \longrightarrow 3CO_2 + 4H_2O$
(d) $C_3H_8 + 3O_2 \longrightarrow 3CO_2 + 4H_2\uparrow$

3. ಜೀವಿಗಳಲ್ಲಿ ಪರಾವರ್ತಿತ ಚಾಪವು ಹಾದುಹೋಗುವ ಸರಿಯಾದ ಮಾರ್ಗ
(ಎ) ಗ್ರಾಹಕ, ಜ್ಞಾನವಾಹಿ ನರಕೋಶ, ಕಾರ್ಯನಿರ್ವಾಹಕ, ಕ್ರಿಯಾವಾಹಿ ನರಕೋಶ, ಸಂಬಂಧ ಕಲ್ಪಿಸುವ ನರಕೋಶ
(ಬಿ) ಸಂಬಂಧ ಕಲ್ಪಿಸುವ ನರಕೋಶ, ಗ್ರಾಹಕ, ಜ್ಞಾನವಾಹಿ ನರಕೋಶ, ಕಾರ್ಹನಿರ್ವಾಹಕ
(ಸಿ) ಸಂಬಂಧ ಕಲ್ಪಿಸುವ ನರಕೋಶ, ಜ್ಞಾನವಾಹಿ ನರಕೋಶ, ಕ್ರಿಯಾವಾಹಿ ನರಕೋಶ, ಕಾರ್ಯನಿರ್ವಾಹಕ
(ಡಿ) ಗ್ರಾಹಕ, ಜ್ಞಾನವಾಹಿ ನರಕೋಶ, ಕ್ರಿಯಾವಾಹಿ ನರಕೋಶ, ಕಾರ್ಯನಿರ್ವಾಹಕ, ಸಂಬಂಧ ಕಲ್ಪಿಸುವ ನರಕೋಶ

4. ಮಾಲಿನ್ಯದಿಂದ ಉಂಟಾದ ಸ್ವಾಭಾವಿಕ ವಿದ್ಯಮಾನದ ಅಪಾಯ
(ಎ) ಭೂತಾಪದ ಏರಿಕೆ
(ಬಿ) ಪರಿಸರ ಸಮತೋಲನ
(ಸಿ) ಹಸಿರು ಮನೆ ಪರಿಣಾಮ
(ಡಿ) ಮರುಭೂಮೀಕರಣ

5. ಐದು ಕಿಲೋ ಗ್ರಾಂನಷ್ಟು ತುಕ್ಕು ಹಿಡಿದ ಕಬ್ಬಿಣದ ಪುಡಿಯನ್ನು ನಿಮಗೆ ನೀಡಲಾಗಿದೆ. ಈ ಕೆಳಗಿನ ಒಂದು ವಿಧಾನದಿಂದ ಶುದ್ಧ ಕಬ್ಬಿಣವನ್ನು ಪಡೆಯಬಹುದು.
(ಎ) ಸುಣ್ಣದ ಕಲ್ಲಿನೊಂದಿಗೆ ತುಕ್ಕು ಹಿಡಿದ ಕಬ್ಬಿಣದ ಪುಡಿಯನ್ನು ಕಾಯಿಸುವುದು.
(ಬಿ) ಕೋಕ್‌ನೊಂದಿಗೆ ತುಕ್ಕು ಹಿಡಿದ ಕಬ್ಬಿಣದ ಪುಡಿಯನ್ನು ಕಾಯಿಸುವುದು.
(ಸಿ) ಗಾಳಿಯಲ್ಲಿ ತುಕ್ಕು ಹಿಡಿದ ಕಬ್ಬಿಣದ ಪುಡಿಯನ್ನು ಹುರಿಯುವುದು.
(ಡಿ) ಬಿಸಿ ನೀರಿನೊಂದಿಗೆ ತುಕ್ಕು ಹಿಡಿದ ಕಬ್ಬಿಣದ ಪುಡಿಯನ್ನು ತೊಳೆಯುವುದು

6. ಸಸ್ಯ ಬೀಜಗಳಿಂದ ಪಡೆದ ಕಚ್ಚಾ ಎಣ್ಣೆಯನ್ನು ಉಪಯುಕ್ತ ಇಂಧನವನ್ನಾಗಿ ಪರಿವರ್ತಿಸುವ ಕ್ರಿಯೆ
(ಎ) ಟ್ರಾನ್ಸ್‌ಎಸ್ಟರ್‌ಫಿಕೇಶನ್
(ಬಿ) ಬಯೋಗ್ಯಾಸಿಫಿಕೇಷನ್
(ಸಿ) ಬಯೋಪೈರೋಲಿಸಿಸ್
(ಡಿ) ಎಸ್ಟರ್‌ಫಿಕೇಷನ್

7. ಭಾರತದಲ್ಲಿನ ಲಡಾಖ್ ಪ್ರದೇಶದಲ್ಲಿರುವ ಪ್ಯೂಗದಲ್ಲಿ ಬಳಸುವ ಶಕ್ತಿಯ ವಿಧ
(ಎ) ಗಾಳಿ ಶಕ್ತಿ (ಬಿ) ಅಣುಶಕ್ತಿ
(ಸಿ) ಸೌರ ಶಕ್ತಿ (ಡಿ) ಭೂ – ಉಷ್ಣಶಕ್ತಿ

8. ಮರಕ್ಕಿಂತ ಇದ್ದಿಲು ಉತ್ತಮ ಇಂಧನ ಕಾರಣ.
(ಎ) ಇದ್ದಿಲು ಸುಲಭವಾಗಿ ದೊರೆಯುವುದು
(ಬಿ) ಮರಕ್ಕಿಂತ ಇದ್ದಿಲು ತುಂಬಾ ಅಗ್ಗ
(ಸಿ) ಇದ್ದಿಲು ಪೂರ್ಣವಾಗಿ ದಹಿಸುತ್ತದೆ ಮತ್ತು ಕಾರ್ಬನ್ ಡೈ ಆಕ್ಸೈಡ್ ಅನ್ನು ಕಡಿಮೆ ಉತ್ಪತ್ತಿ ಮಾಡುವುದು.
(ಡಿ) ಮರಕ್ಕಿಂತ ಇದ್ದಿಲು ಸುಲಭವಾಗಿ ದಹಿಸುತ್ತದೆ.

9. ರಕ್ತದ ಪ್ಲಾಸ್ಮಾದಲ್ಲಿರುವ ಬೃಹತ್ ಪ್ರಮಾಣದ ಧಾತು
(ಎ) ಸೋಡಿಯಂ (ಬಿ) ಮೆಗ್ನಿಷಿಯಂ
(ಸಿ) ಕ್ರೋಮಿಯಂ (ಡಿ) ಪೊಟ್ಯಾಷಿಯಂ

10. ನಿತ್ಯ ಜೀವನದಲ್ಲಿ ಮೋಟಾರಿನ ಅನ್ವಯ ಇದಾಗಿದೆ.
(ಎ) ಗ್ಯಾಲ್ವಾನೋಮೀಟರ್ ಮಾತ್ರ
(ಬಿ) ಪರಿವರ್ತಕ ಮಾತ್ರ
(ಸಿ) ಡೈನಮೋ ಮತ್ತು ಪರಿವರ್ತಕ
(ಡಿ) ಪರಿವರ್ತಕ ಮತ್ತು ಗ್ಯಾಲ್ವಾನೋ ಮೀಟರ್

11. 75 $\Omega$ ರೋಧವಿರುವ ಸುರುಳಿಯಲ್ಲಿ 2 ಆಂಪೀಯರ್ ವಿದ್ಯುತ್ ಅನ್ನು 2ನಿಮಿಷಗಳ ತನಕ ಹಾಯಿಸಿದಾಗ ಸುರುಳಿಯಲ್ಲಿ ಉತ್ಪತ್ತಿಯಾಗುವ ಉಷ್ಣ
(ಎ) 3600J (ಬಿ) 36000J
(ಸಿ) 360J (ಡಿ) 36J

12. ಆಹಾರದಲ್ಲಿರುವ ಪಿಷ್ಟವನ್ನು ಪತ್ತೆಹಚ್ಚುವಲ್ಲಿ ಬಳಸುವ ರಾಸಾಯನಿಕ ವಸ್ತು
(ಎ) ಅಯೋಡಿನ್ ದ್ರಾವಣ
(ಬಿ) ಬೆನೆಡಿಕ್ಟ್ ದ್ರಾವಣ
(ಸಿ) ತಾಮ್ರದ ಸಲ್ಫೇಟಿನ ದ್ರಾವಣ
(ಡಿ) ಫೆರಸ್ ಸಲ್ಫೇಟಿನ ದ್ರಾವಣ

13. ಯಕೃತ್‌ನ ನ್ಯೂನತಾ – ಕಾರ್ಯದಿಂದ ಬಳಲುತ್ತಿರುವ ರೋಗಿಯೊಬ್ಬನಿಗೆ, ವೈದ್ಯನು ಈ ಕೆಳಗಿನ ಯಾವ ವಿಧದ ಜೀವ ಸತ್ವವನ್ನು ತೆಗೆದುಕೊಳ್ಳಲು ಸಲಹೆ ನೀಡಿರುವರು?
(ಎ) ಜೀವಸತ್ವ ಎ
(ಬಿ) ಜೀವಸತ್ವ ಕೆ
(ಸಿ) ಜೀವಸತ್ವ ಇ
(ಡಿ) ಜೀವಸತ್ವ ಬಿ

14. UPS ನ ವಿಸ್ತೃತ ರೂಪ
(ಎ) ಯುನೈಟೆಡ್ ಪವರ್ ಸಲ್ಯೂಷನ್
(ಬಿ) ಅನ್‌ಇಂಟರಪ್ಟೆಡ್ ಪವರ ಸಪ್ಲೈ
(ಸಿ) ಅನ್‌ಇಂಟರಪ್ಟೆಡ್ ಪವರ್ ಸಲ್ಯೂಷನ್
(ಡಿ) ಯುನೈಟೆಡ್ ಪವರ್ ಸಪ್ಲೈ

prepp Your Personal Exams Guide

Prepp
Your Personal Exams Guide

15. ಸೀಸದ ನೈಟ್ರೇಟನ್ನು ಉಷ್ಣ ವಿಭಜನ ಕ್ರಿಯೆಗೆ ಒಳಪಡಿಸಿದಾಗ ದೊರಕುವ ಉತ್ಪನ್ನಗಳ ಸರಿಯಾದ ಅನುಕ್ರಮ
(ಎ) ಸೀಸ, ನೈಟ್ರೋಜನ್ ಡೈ ಆಕ್ಸೈಡ್ ಮತ್ತು ಆಕ್ಸಿಜನ್
(ಬಿ) ಸೀಸದ ಆಕ್ಸೈಡ್, ನೈಟ್ರೋಜನ್ ಡೈ ಆಕ್ಸೈಡ್ ಮತ್ತು ಆಕ್ಸಿಜನ್
(ಸಿ) ಸೀಸದ ಆಕ್ಸೈಡ್, ನೈಟ್ರಿಕ್ ಆಕ್ಸೈಡ್ ಮತ್ತು ಆಕ್ಸಿಜನ್
(ಡಿ) ಸೀಸದ ಆಕ್ಸೈಡ್ ಮತ್ತು ನೈಟ್ರೋಜನ್ ಡೈ ಆಕ್ಸೈಡ್

16. ನಮ್ಮ ಸೌರವ್ಯೂಹದಲ್ಲಿ ಒಳಗ್ರಹಗಳಲ್ಲಿ ಅತ್ಯಂತ ದೊಡ್ಡದು.
(ಎ) ಶುಕ್ರ (ಬಿ) ಬುಧ (ಸಿ) ಮಂಗಳ (ಡಿ) ಭೂಮಿ

17. ಕಬ್ಬಿಣವು ಯಾವ ರೀತಿಯ ಅಯಸ್ಕಾಂತೀಯ ವಸ್ತು?
(ಎ) ಡಯಕಾಂತೀಯ (ಬಿ) ಪ್ಯಾರಕಾಂತೀಯ
(ಸಿ) ಫೆರೋಕಾಂತೀಯ (ಡಿ) ಅಕಾಂತೀಯ

18. ಒಂದು ಆವರ್ತನದಲ್ಲಿ ಸರಳ ಲೋಲಕದ ಕೆಲಸವು ಸಮನಾಗಿರುವುದು ಅದರ
(ಎ) ಚಲನಶಕ್ತಿಗೆ (ಬಿ) ಪ್ರಚ್ಛನ್ನ ಶಕ್ತಿಗೆ
(ಸಿ) ಶೂನ್ಯಕ್ಕೆ (ಡಿ) ಒಟ್ಟು ಶಕ್ತಿಗೆ

19. ಒಂದು ಪೆಟ್ಟಿಗೆಯು ಘರ್ಷಣೆ ಇಲ್ಲದ ಒಂದು ಕ್ಷಿತಿಜೀಯದ ಮೇಲೆ ನಿಶ್ಚಲ ಸ್ಥಿತಿಯಲ್ಲಿದೆ. ಆ ಪೆಟ್ಟಿಗೆಯ ಮೇಲೆ 10 ನ್ಯೂಟನ್ ಬಲವು 3 ಸೆಕೆಂಡ್‌ಗಳ ಕಾಲ ಪ್ರಯೋಗಿಸಲ್ಪಟ್ಟಿದೆ. 3ನೇ ಸೆಕೆಂಡಿನ ಕೊನೆಯ ಅವಧಿಯಲ್ಲಿ ಆ ಪೆಟ್ಟಿಗೆಯ ಸಂವೇಗವು
(ಎ) 30 ಕಿ.ಗ್ರಾಂ ಮೀ/ಸೆ (ಬಿ) 60 ಕಿ.ಗ್ರಾಂ/ಸೆ
(ಸಿ) 90 ಕಿ.ಗ್ರಾಂ/ಸೆ (ಡಿ) 15 ಕಿ.ಗ್ರಾಂ/ಸೆ

20. ಕಾಂತಕ್ಷೇತ್ರದ SI ಮೂಲಮಾನ
(a) N Am (b) $N^{A-1} m^{-1}$
(c) $N^{-1}$ Am (d) $N^{-1} A^{-1} m$

21. ZPD ಎಂದರೆ :
(ಎ) ಜೋನ್ ಆಫ್ ಪ್ರಾಕ್ಸಿಮಲ್ ಡೆವಲಪ್‌ಮೆಂಟ್
(ಬಿ) ಜೋನ್ ಆಫ್ ಪರ್‌ಫೆಕ್ಷನ್ ಡೆವಲಪ್‌ಮೆಂಟ್
(ಸಿ) ಜೋನ್ ಆಫ್ ಪ್ರಾವಿಜನಲ್ ಡೆವಲಪ್‌ಮೆಂಟ್
(ಡಿ) ಜೋನ್ ಆಫ್ ಪ್ರೈಮರಿ ಡೆವಲಪ್‌ಮೆಂಟ್

22. ಸಂಕಲನಾತ್ಮಕ ಮೌಲ್ಯಮಾಪನ
(ಎ) ಕಿರು ಪರೀಕ್ಷೆ (ಬಿ) ಘಟಕ ಪರೀಕ್ಷೆ
(ಸಿ) ವಾರ್ಷಿಕ ಪರೀಕ್ಷೆ (ಡಿ) ನೈದಾನಿಕ ಪರೀಕ್ಷೆ

23. ಯಾವ ಮಕ್ಕಳಿಗೆ ಪರಿಹಾರ ಬೋಧನೆಯು ಅವಶ್ಯಕ?
(ಎ) ಅನಕ್ಷರಸ್ಥ ಪೋಷಕರ ಮಕ್ಕಳಿಗೆ
(ಬಿ) ನೌಕರಿಯಲ್ಲಿರುವ ಪೋಷಕರ ಮಕ್ಕಳಿಗೆ
(ಸಿ) ಬುದ್ಧಿವಂತ ವರ್ಗದ ಮಕ್ಕಳಿಗೆ
(ಡಿ) ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ

24. ಇದು ಶಿಕ್ಷಕ ಕೇಂದ್ರಿತ ಪದ್ಧತಿ.
(ಎ) ಅನುಗಮನ ಪದ್ಧತಿ (ಬಿ) ನಿಗಮನ ಪದ್ಧತಿ
(ಸಿ) ಸಮಸ್ಯೆ ಬಿಡಿಸುವ ಪದ್ಧತಿ (ಡಿ) ಉಪನ್ಯಾಸ ಪದ್ಧತಿ

25. ವೈಗಾಟ್‌ಸ್ಕಿ ರಚನವಾದವು :
(ಎ) ಸಾಮಜಿಕ ರಚನವಾದ (ಬಿ) ವೈಯಕ್ತಿಕ ರಚನವಾದ
(ಸಿ) ಅನುಭವ ತತ್ವ ರಚನವಾದ (ಡಿ) ಅನ್ವೇಷಣಾ ರಚನವಾದ

26. ಮಕ್ಕಳು ತೇಲುವಿಕೆ ನಿಯಮಗಳ ವಿವಿಧ ಹಂತಗಳನ್ನು ಸಂಶ್ಲೇಷಿಸಿ ಸಾರಾಂಶ ಪಡೆಯುವಲ್ಲಿ ಇಚ್ಛಿತರಾಗುವರು. ಇದು ಜ್ಞಾನಾತ್ಮಕ ವಲಯದಲ್ಲಿರುವ ಈ ವರ್ತನಾ ವಿಶೇಷ.
(ಎ) ಅನ್ವಯ (ಬಿ) ವಿಶ್ಲೇಷಣೆ
(ಸಿ) ಸಂಶ್ಲೇಷಣೆ (ಡಿ) ಮೌಲ್ವೀಕರಣ

27. ಜ್ಞಾನಾತ್ಮಕ ವಲಯವು ಇದಕ್ಕೆ ಸಂಬಂಧಿಸಿದುದಾಗಿದೆ.
(ಎ) ಜ್ಞಾನ (ಬಿ) ಭಾವನೆ
(ಸಿ) ಮನೋಜನ ಕೌಶಲ (ಡಿ) ಸ್ಮರಣೆ

28. ಶಿಕ್ಷಕರಿಗೆ "ರಿಫ್ಲೆಕ್ಷನ್ ನಿಯತಕಾಲಿಕ"ವು ಸಹಾಯಕವಾಗಿದೆ.
(ಎ) ಆಲೋಚನಾಬದ್ಧವಾಗಿ, ಆಳವಾಗಿ ಹಿಂದಿನ ಘಟನೆಗಳನ್ನು ಮತ್ತು ಬದಲಿ ಕ್ರಿಯಾತ್ಮಕತೆಗಳನ್ನು ಗಣನೆಗೆ ತೆಗೆದುಕೊಳ್ಳಲು
(ಬಿ) ಕನ್ನಡಿಯಿಂದ ರಿಫ್ಲೆಕ್ಷನ್ ಅನ್ನು ಮಾಡಲಾಗಿರುತ್ತದೆ
(ಸಿ) ಇದು ಶಿಕ್ಷಕರು ಪಾಠ–ಟಿಪ್ಪಣಿಗಳನ್ನು ಬರೆಯುವ ನಿಯತಕಾಲಿಕವಾಗಿದೆ.
(ಡಿ) ಇದು ವಿಜ್ಞಾನದ ಪ್ರಯೋಗ ಮತ್ತು ವೀಕ್ಷಣೆಗಳನ್ನು ಬರೆಯುವ ನಿಯತಕಾಲಿಕ

29. ಡ್ರಿಲ್ ಮತ್ತು ಅಭ್ಯಾಸಗಳು :
(ಎ) ಸಮನಾದ ಪದ
(ಬಿ) ಹೆಸರಿನಲ್ಲಿ ವ್ಯತ್ಯಸಿಸುತ್ತದೆ
(ಸಿ) ಭಾಗದಿಂದ ಪೂರ್ಣದೆಡೆಗೆ ಸಂಬಂಧಿಸಿದುದಾಗಿದೆ
(ಡಿ) ಸಂಬಂಧಿಸಿದುದಾಗಿಲ್ಲ

30. ಸಮಗ್ರತೆಯ ವಿಧಾನದಲ್ಲಿ :
(ಎ) ಒಂದು ಪರಿಕಲ್ಪನೆಯ ವಿವಿಧ ಆಯಾಮಗಳನ್ನು ಚರ್ಚಿಸಲಾಗಿದೆ
(ಬಿ) ಒಂದು ಪರಿಕಲ್ಪನೆಯನ್ನು ಪ್ರತ್ಯೇಕಿಸಿ ತಿಳಿಸಲಾಗಿದೆ
(ಸಿ) ಘಟಕದ ವಿವಿಧತೆಯನ್ನು ಬೋಧಿಸಲಾಗಿದೆ
(ಡಿ) ಪ್ರಮುಖ ವಿಷಯದ ಅಧ್ಯಯನವನ್ನು ಮಾತ್ರ ಮಾಡುವ ವಿಧಾನವಾಗಿದೆ.

## ಕೀ – ಉತ್ತರಗಳು

| | | | | | |
|---|---|---|---|---|---|
| 1 | ಬಿ | 11 | ಬಿ | 21 | ಎ |
| 2 | ಸಿ | 12 | ಎ | 22 | ಸಿ |
| 3 | ಡಿ | 13 | ಸಿ | 23 | ಡಿ |
| 4 | ಸಿ | 14 | ಬಿ | 24 | ಡಿ |
| 5 | ಬಿ | 15 | ಬಿ | 25 | ಎ |
| 6 | ಎ | 16 | ಡಿ | 26 | ಸಿ |
| 7 | ಡಿ | 17 | ಸಿ | 27 | ಎ |
| 8 | ಸಿ | 18 | ಸಿ | 28 | ಎ |
| 9 | ಬಿ | 19 | ಎ | 29 | ಸಿ |
| 10 | ಎ | 20 | ಬಿ | 30 | ಎ |